ಗಡ್ಡ!

ರಾಜರ ಗತ್ತು, ಸಾಧುವಿನ ಧ್ಯಾನ, ತತ್ವಜ್ಞಾನಿಗಳ ಚಿಂತನೆ, ಸರ್ವಾಧಿಕಾರಿಯ ದರ್ಪ ಎಲ್ಲದರ ಸಂಕೇತವೂ, ಚರಿತ್ರೆಯ ಭಾಗವೂ ಆದ ದಾಡಿ ಈಗ ಫ್ಯಾಷನ್ ಜಗತ್ತಿನಲ್ಲಿ ಕಣ್ಣು ಕೋರೈಸುತ್ತಿದೆ. ದಾಡಿ ಲೋಕದ ಸತ್ಯಕಥೆಗಳು ಇದೋ..

■ ವಿಶಾಖ ಎನ್.

ದೊಡ್ಡ ಮಾಲ್. ದಾಡಿ ಬಿಟ್ಟ ಒಬ್ಬನಿಗೆ ನೀಟಾಗಿ ಶೇವ್ ಮಾಡಿದ್ದ ಇನ್ನೊಬ್ಬ ಗಡ್ಡದ ಕಥೆಗಳನ್ನು ಹೇಳುತ್ತಿದ್ದ. ಅವು ಕಥೆಗಳಾಗಿ ಮಜ ಕೊಡುವಂಥವು. ಜೊತೆಗೆ ಗಡ್ಡದ ಚರಿತ್ರೆಯೂ ಹೌದು. ಅವನು ಹೇಳಿದ ಒಂದು ಕಥೆ ಹೀಗಿದೆ...

ಕ್ರಿ.ಶ.1698. ಯುರೋಪ್‌ನ ಪಶ್ಚಿಮ ಭಾಗ ಹಾಗೂ ಅಮೆರಿಕದಲ್ಲಿ ಗಡ್ಡ ಬೋಳಿಸುವ ಫ್ಯಾಷನ್ ಜೋರಾದ ಕಾಲಘಟ್ಟ. ಆಗ ರಷ್ಯಾ ದೊರೆ ಪೀಟರ್ ಗ್ರೇಟ್ ಕೂಡ ಪ್ರಜೆಗಳಿಗೆಲ್ಲಾ ಕ್ಲೀನ್ ಶೇವ್ ಮಾಡಿಕೊಳ್ಳುವಂತೆ ಆದೇಶ ಕೊಟ್ಟ. 1705ರಲ್ಲಿ ಗಡ್ಡ ಬಿಟ್ಟವರಿಗೆ ತೆರಿಗೆ ವಿಧಿಸತೊಡಗಿದ. ಸಮಕಾಲೀನ ಪಾಶ್ಚಾತ್ಯ ಯುರೋಪ್ ಯಾವ ಫ್ಯಾಷನ್ ಒಪ್ಪಿರುತ್ತದೋ, ರಷ್ಯಾ ಕೂಡ ಚಾಚೂ ತಪ್ಪದೆ ಅದನ್ನೇ ಪಾಲಿಸಬೇಕು ಎಂಬುದು ಅವನ ಬಲವಾದ ನಂಬಿಕೆಯಾಗಿತ್ತು. ಆಗ ರಾಜನ ಸವಾರಿ ಬಂತೆಂಬುದನ್ನು ಗಡ್ಡ ಬಿಟ್ಟ ಪ್ರಜೆ ದೂರದಲ್ಲಿ ಕಂಡರೆ, ಅವನು ತನ್ನ ಮನೆ ತಲುಪುವಷ್ಟರಲ್ಲಿ ಸರಸರನೆ ಗಡ್ಡ ಬೋಳಿಸಿಕೊಳ್ಳುತ್ತಿದ್ದ. ಧಾವಂತದಲ್ಲಿ ಗಡ್ಡ ಬೋಳಿಸುವಾಗ ಗಾಯಗಳಾಗಿ ರಕ್ತ ಸೋರುತ್ತಿದ್ದುದೂ ಉಂಟು. ಅದನ್ನು ನೋಡಿದ ಪೀಟರ್ ಗ್ರೇಟ್ ಪ್ರಜೆಗಳಿಗೆ ತನ್ನನ್ನು ಕಂಡರೆ ಭಯವಿದೆ ಎಂದು ಹೆಮ್ಮೆಪಡುತ್ತಿದ್ದ.

ಇನ್ನೂ ಒಂದು ಮಜವಾದ ಕಥೆಯಿದೆ. ಜಗತ್ತನ್ನೇ

ಜಯಿಸಲು ಹೊರಟಿದ್ದ ಅಲೆಗ್ಸಾಂಡರ್ ಇದ್ದಕ್ಕಿದ್ದಂತೆ ತನ್ನ ಸೇನೆಯವರಿಗೆಲ್ಲಾ ಗಡ್ಡ ಬೋಳಿಸಿಕೊಳ್ಳುವಂತೆ ಆದೇಶ ಕೊಟ್ಟ. ಅವರು ಚಕಾರವೆತ್ತದೆ ಬೋಳಿಸಿಕೊಂಡರು. ಒಬ್ಬ ಮಾತ್ರ ಅದಕ್ಕೆ ಕಾರಣವೇನು ಎಂದು ನಡುಗುತ್ತ ಕೇಳಿದ. ಅಲೆಗ್ಸಾಂಡರ್ ಅದಕ್ಕೆ ಉತ್ತರವನ್ನೂ ಕೊಟ್ಟ– ಯುದ್ಧಕಾಲದಲ್ಲಿ ಶತ್ರುಗಳು ಗಡ್ಡ ಹಿಡಿದು ಹತ್ತಿರಕ್ಕೆ ಸೆಳೆದು, ಇರಿಯುವ ಅಪಾಯವಿರುತ್ತದೆ. ಗಡ್ಡವನ್ನು ಬಲವಾಗಿ ಎಳೆದರೆ ಆಗುವ ನೋವು ದೊಡ್ಡದು. ಅದರಿಂದ ಬಿಡಿಸಿಕೊಳ್ಳುವ ಹೊತ್ತಿಗೆ ಪ್ರಾಣ ಹಾರಿಹೋದೀತು. ಅಲೆಗ್ಸಾಂಡರನ ಆತಂಕವನ್ನು ಎಲ್ಲ ಸೈನಿಕರೂ ಒಪ್ಪಿದರು. ಆದರೆ, ಗ್ರೀಕ್‌ನಲ್ಲಿ ಗಡ್ಡ ಬೋಳಿಸುವುದೇ ಫ್ಯಾಷನ್ ಆಗತೊಡಗಿತು. ಆಗ

ತತ್ವಜ್ಞಾನಿಗಳೆಲ್ಲಾ ಗಡ್ಡ ನೀವಿಕೊಂಡರು. ರಾಜಕಾರಣಿಗಳು ಮೀಸೆ ಮೇಲೆ ಕೈಯಿಟ್ಟರು. ಶೇವ್ ವಿರೋಧಿ ಕಾನೂನು ಕೂಡ ಜಾರಿಗೆ ಬಂತು. ಅರಿಸ್ಟಾಟಲ್ ಕೂಡ ಅದನ್ನು ಅನುಮೋದಿಸಿದ. ಮುಂದೆ ಗ್ರೀಕ್‌ನಲ್ಲಿ ಶೇವ್ ಮಾಡಿದವರೆಲ್ಲಾ ಶೋಕಿಲಾಲರು, ಗಡ್ಡ ಬಿಟ್ಟವರೆಲ್ಲಾ ತತ್ವಜ್ಞಾನಿಗಳು ಎಂಬ ಅಭಿಪ್ರಾಯ ದಟ್ಟೈಸಿತು. ಬಹುಶಃ ಜಗತ್ತಿನ ಎಲ್ಲೆಡೆ ಗಡ್ಡ ಬುದ್ಧಿಯ ಸಂಕೇತ ಎನಿಸಿಕೊಂಡಿದ್ದು ಆ ಕಾಲಘಟ್ಟದಲ್ಲಿಯೇ ಇರಬೇಕು.

ಜಗತ್ತಿನಲ್ಲಿ ಮೊದಲು ಶೇವ್ ಮಾಡಿಸಿಕೊಂಡವನು ಯಾರು ಎಂಬ ಕ್ವಿಜ್ ಕೇಳುತ್ತಾ, ಅದಕ್ಕೆ ಉತ್ತರವನ್ನೂ ಕೊಡುವವರಿದ್ದಾರೆ. ಅದರ ಸತ್ಯಾಸತ್ಯತೆ ಯಾರಿಗೂ ಗೊತ್ತಿಲ್ಲ. ಪ್ರಾಚೀನ ರೋಮ್‌ನ ಚರಿತ್ರೆಯಲ್ಲಿ ಮಾತ್ರ ಅದರ ಪ್ರಸ್ತಾಪವಿದೆ. ತಲೆಗೂದಲನ್ನು ಕತ್ತರಿಸುವ ಹಾಗೂ ಗಡ್ಡ ಬೋಳಿಸುವ ವೃತ್ತಿಪರನನ್ನು ರೋಮ್‌ಗೆ ಮೊದಲು ಕರೆತಂದವನ ಹೆಸರು ಪಿ.ಟಿಸಿನಿಯಸ್. ಕ್ರಿ.ಪೂ.299ರಲ್ಲಿ ಸಿಜಿಯೋ ಆಫ್ರಿಕನಸ್ ಎಂಬ ವ್ಯಕ್ತಿ ಮೊದಲಿಗೆ ಶೇವ್ ಮಾಡಿದನಂತೆ. ಅವನ ಕೆನ್ನೆಗಳು ಫಳಫಳ ಹೊಳೆದದ್ದನ್ನು ನೋಡಿ ಬಹುತೇಕ ರೋಮನ್ನರು ಶೇವ್ ಮಾಡಿಸಿ ಕೊಂಡರಂತೆ. ಗಡ್ಡವಿಲ್ಲದವನು ರೋಮನ್, ಗಡ್ಡ ಇದ್ದವ ಗ್ರೀಕ್ ಎಂಬ ಮಾತು ಆಗ ರೂಢಿಗೆ ಬಂದಿತ್ತು.

ಭಾರತದಲ್ಲಿ ದಾಡಿ, ಮೀಸೆಗೂ ಧರ್ಮಕ್ಕೂ ಸಂಬಂಧವಿದೆ. ಸಿಖ್ಖರು ದಾಡಿ, ಮೀಸೆಗೆ ಕತ್ತರಿ ಹಾಕುವುದಿಲ್ಲ. ಪುರಾಣ, ಗ್ರಂಥಗಳ ಅಧ್ಯಯನ ಮಾಡಿದವರು

(22ನೇ ಪುಟ ನೋಡಿ)